## ಕರ್ನಾಟಕದಲ್ಲಿ ಹೊಸ ಬೆಳೆಯ ಜೋಳ ಮಾರುಕಟ್ಟೆಗೆ ಆವಕ:–

ಕರ್ನಾಟಕದಲ್ಲಿ ಹೊಸಬೆಳೆಯ ಜೋಳ ಮಾರುಕಟ್ಟೆಗೆ ಆವಕವಾಗಲಾರಂಭವಾಗಿದೆಯೆನ್ನಲಾಗಿದ್ದು ದರ ಹಳೆ ಬೆಳೆಯದಕ್ಕಿಂತ ಕಡಿಮೆಯಿದ್ದರೂ ಹಿಂದಿನ ವರ್ಷ ಆವಕದ ಸಮಯದಲ್ಲಿದ್ದ ದರಕ್ಕಿಂತ ಹೆಚ್ಚಳವಿದೆಯೆನ್ನಲಾಗಿದೆ. ತೇವಾಂಶ ಮಿತಿಯಾದ 14 ಶೇಕಡಾಕ್ಕಿಂತ ಹೆಚ್ಚು 30 ಶೇಕಡಾಕ್ಕಿಂತಲೂ ಹೆಚ್ಚು ತೇವಾಂಶವಿರುವುದರಿಂದ ದರ ಕಡಿಮೆಯೆನ್ನಲಾಗಿದೆ. ಇಳುವರಿ ಹಿಂದಿನ ವರ್ಷಕ್ಕಿಂತ ಅಲ್ಪಪ್ರಮಾಣದ ಹೆಚ್ಚಳವಿದೆಯೆನ್ನಲಾಗಿದ್ದು ಈ ವರ್ಷ 2022–20223 ರಲ್ಲಿ 23.1 ಮಿಲಿಯನ್ ಟನ್ ಜೋಳ ಉತ್ಪಾದನೆಯ ನಿರೀಕ್ಷೆಯಿದೆಯೆನ್ನಲಾಗಿದೆ. ಹಿಂದಿನ ವರ್ಷ 21.2 ಮಿಲಿಯನ್ ಟನ್ ಉತ್ಪಾದಿಸಲಾಗಿತ್ತೆನ್ನಲಾಗಿದೆ.

## ಸೋಯಾಬೀನ್ ಸಾಸಿವೆ ದರ ಇಳಿಕೆ:–

ಲಾತೂರ್ ಮಾರುಕಟ್ಟೆಯಲ್ಲಿ ಸೋಯಾಬೀನ್ ಆವಕ 4000 ಚೀಲಗಳಿಂದ 5000–7000 ಚೀಲಗಳ ತನಕ ಹೆಚ್ಚಳವಾಗಿದ್ದು ಬೇಡಿಕೆ ಮಂದಗತಿಯಲ್ಲಿರುವುದರಿಂದ ದರ ಕ್ವಿಂಟಾಲಿಗೆ ರೂ.1000 ಇಳಿಕೆಯಾಗಿದೆಯೆನ್ನಲಾಗಿದೆ. ಸಾಸಿವೆ ಆವಕ 175000 ಚೀಲಗಳಿಂದ 150000 ಚೀಲಗಳಿಗೆ ಇಳಿಕೆಯಾದರೂ ಜಾಗತಿಕ ಖಾದ್ಯತೈಲ, ತೈಲಬೀಜಗಳ ದರ ಇಳಿಕೆಯನ್ನನುಸರಿಸಿ, ಸಾಸಿವೆ ದರವೂ ಕ್ವಿಂಟಾಲಿಗೆ ರೂ.100 ರಿಂದ 200 ಇಳಿಕೆಯಾಗು ನಿರೀಕ್ಷೆಯಿದೆಯೆನ್ನಲಾಗಿದೆ. ಖಾದ್ಯತೈಲಗಳೂ, ವನಸ್ಪತಿ ದರಗಳೂ ಸ್ಥಳೀಯ ಮಾರುಕಟ್ಟೆಗಳಲ್ಲಿ ಇಳಿಕೆ ದಾಖಲಿಸಿವೆ.

## ಜಾಗತಿಕ ಮಾರುಕಟ್ಟೆಯಲ್ಲಿ ಸಕ್ಕರೆಯ ದರ ಇಳಿಕೆ:–

ಬ್ರೆಜಿಲ್‌ನ ದಕ್ಷಿಣಮಧ್ಯದ ಸಕ್ಕರೆ ಉತ್ಪಾದನೆ ಹೆಚ್ಚಳವಾದುದರಿಂದ ಜಾಗತಿಕ ಸಕ್ಕರೆ ದರ ಇಳಿಕೆಯಾಗಿದೆಯೆನ್ನಲಾಗಿದೆ. ಜಾಗತಿಕ ದರ ಇಳಿಕೆಯಾದರೂ ದೇಶೀ ಬೇಡಿಕೆ ಹೆಚ್ಚಳದಿಂದ ದೇಶೀ ಮಾರುಕಟ್ಟೆಯಲ್ಲಿ ಸಕ್ಕರೆ ದರ ಹೆಚ್ಚಳದಲ್ಲಿದೆ. ತಂಪುಪಾನೀಯ ಹಾಗೂ ಐಸ್‌ಕ್ರೀಂ ತಯಾರಿಕಾ ವಲಯಗಳಿಂದ ಬೇಡಿಕೆ ಹೆಚ್ಚಳದಿಂದ ದರ ಹೆಚ್ಚಳದಲ್ಲೇ ನಿಂತಿದೆಯೆನ್ನಲಾಗಿದೆ.